## 10ನೆಯ ತರಗತಿ

## ಮೊದಲನೆಯ ಸಂಕಲನಾತ್ಮಕ ಪರೀಕ್ಷೆ – ಸೆಪ್ಟಂಬರ್ 2022

## ವಿಷಯ : ದ್ವಿತೀಯ ಭಾಷೆ – ಕನ್ನಡ

ಸಮಯ : 2.30 ಗಂಟೆಗಳು | ಗರಿಷ್ಠ ಅಂಕಗಳು : 80

---

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ. **4 x 1 = 4**

1. ಮಳೆಗಾಲ ಪದವು ಈ ಸಂಧಿಗೆ ಉದಾಹರಣೆ
   ಎ) ಲೋಪ ಸಂಧಿ    ಬಿ) ಆದೇಶ ಸಂಧಿ
   ಸಿ) ಆಗಮ ಸಂಧಿ    ಡಿ) ವೃದ್ಧಿ ಸಂಧಿ

2. ಮನೆಯಿಂದ ಪದದಲ್ಲಿರುವ ವಿಭಕ್ತಿ ಪ್ರತ್ಯಯ
   ಎ) ದ್ವಿತೀಯ    ಬಿ) ಪಂಚಮಿ
   ಸಿ) ಪ್ರಥಮ    ಡಿ) ತೃತೀಯ

3. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅನುನಾಸಿಕಗಳ ಸಂಖ್ಯೆ
   ಎ) 5    ಬಿ) 10
   ಸಿ) 13    ಡಿ) 34

4. ಕಾವ್ಯ ಪದದ ತದ್ಭವ
   ಎ) ಹಬ್ಬ    ಬಿ) ಕಬ್ಬ
   ಸಿ) ದಿಬ್ಬ    ಡಿ) ಜುಬ್ಬ

**II.** ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **12 x 1 = 12**

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
6. ಈ ನಾಡಿನ ಬೆನ್ನೆಲುಬು ಯಾರು?
7. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?
8. ಸಸ್ತನಿಗಳ ಆಶ್ರಯದಾಣಗಳು ಯಾವುವು?
9. ಹಕ್ಕಿ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?
10. ಅಸಿ ಮಸಿ ಎಂದರೇನು?
11. ಏಣಿ ಜನರಿಗೆ ಮಾಡಿದ ಉಪಕಾರವೇನು?
12. ಏಣಿಗೆ ಬೀಳುವ ಭಯವಿಲ್ಲ. ಏಕೆ?
13. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?



Use E-Papers, Save Tress
Above line hide when print out

14. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

15. ಸವಿ ಚೈತ್ರದ ಸೊಬಗು ಏನು?

16. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

**III. ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 x 2 = 16**

17. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?

18. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?

19. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ?

20. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

21. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?

22. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

23. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?

24. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

**IV. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1 x 3 = 3**

25. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

**V. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1 x 3 = 3**

26. ಹಸಿ ಸೌದೆ ಬಸುಗುಟ್ಟಿ ದನಿಯನೆತ್ತುವುದಲ್ತೆ,
ಕಿಡಿಸೋಕೆ ಮದ್ದು ಸಿಡಿದಬ್ಬರಿಪುದು–
ಅಂತಿರದೆ ರವಿ ಕರಕೆ ಕರಗುವಿಬ್ಬನಿವೊಲಿರು;
ಸಿಡುಕು ಮಿಡುಕನ್ನು ತೊರೆದು ಮೌನಿಯಾಗು!

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ.** **1 x 3 = 3**

27. ಮಗುವಿನ ಮುಖವು ಚಂದ್ರನಂತೆ ಬೆಳ್ಳಗಿದೆ.

**VII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

28. ಮಾತು ಬೆಳ್ಳಿ, ಮೌನ ಬಂಗಾರ

***ಅಥವಾ***

ಹಾಸಿಗೆ ಇದ್ದಷ್ಟು ಕಾಲು ಚಾಚು



Use E-Papers, Save Tress
Above line hide when print out

VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5 x 3 = 15

29. "ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯಾ"

30. "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ"

31. "ಇಲ್ಲಿ ವಾಸ್ತು ಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ"

32. "ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ"

33. "ನೆಲ ಮುಗಿಲ ವಾಲಗವೆ ನಡೆದಂತಿದೆ"

IX. ಕೆಳಗಿನ ಪದ್ಯ ಭಾಗವನ್ನು ಪೂರ್ಣ ಮಾಡಿ ಬರೆಯಿರಿ. 1 x 4 = 4

34. ಕೊರಡ ಕೊನರಿಸಿ________________________

________________________

________________________

________________________ಮತ್ತೇರಿದೆ

**ಅಥವಾ**

ಯುಗದ ಹಿಂದಿನ________________________

________________________

________________________

________________________ಸವಿ ಚೈತ್ರವು

X. ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 x 4 = 4

35. ಸಿದ್ಧಾರ್ಥನು ಬುದ್ಧನಾದ ಪರಿ ಹೇಗೆ?

**ಅಥವಾ**

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡು ಬಂದಿತು?

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. 1 x 4 = 4 (2+2=4)

36. 'ಚಿಪ್ಕೋ ಚಳವಳಿ' ಜನರಿಗೆ, ಸರ್ಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತಿದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು : ಪರಿಸರಕ್ಕೆ ಪೂರಕವಾಗಿರಬೇಕು (ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು ಇದು ಚಿಪ್ಕೋ ಚಳವಳಿಯ ಮೂಲಮಂತ್ರ) ಅರಣ್ಯಗಳು ಮರಮಟ್ಟುಗಳನ್ನೂ ರಾಳವನ್ನೂ ಒದಗಿಸುವ ಬೃಹತ್ ಆಗರ – ಇದು (ಸರ್ಕಾರದ ವಾಣಿಜ್ಯ ದೃಷ್ಟಿ, ಅರಣ್ಯಗಳು ನೆಲದ ಸಾರವನ್ನು ರಕ್ಷಿಸುವ, ನೀರನ್ನು ಹಿಡಿದಿಡುವ, ಪರಿಸರವನ್ನು ಶುಚಿಯಾಗಿಡುವ ಬೃಹತ್ ನೈಸರ್ಗಿಕ ವ್ಯವಸ್ಥೆ



Use E-Papers, Save Tress
Above line hide when print out

ಕೂಡ. ಇದು ಜನಸಾಮಾನ್ಯರ ದೃಷ್ಟಿ. ಈ ಎರಡೂ ದೃಷ್ಟಿಗಳ ಅರ್ಥಪೂರ್ಣ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ. ಸಮಸ್ತ ರೀತಿಯ ಅಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತ ಪತ್ರಿಕೆಗಳು, ಸಿನಿಮಾ, ರೇಡಿಯೋ, ದೂರದರ್ಶನ ಮುಂತಾದ ಮಾಧ್ಯಮಗಳು ಸಾಧಿಸಲಾರದ ಕೆಲಸವನ್ನು ಚಿಪ್ಕೋ ಸದಸ್ಯರು ಬೆಟ್ಟಗಾಡು ಪ್ರದೇಶಗಳಲ್ಲ ಕಾಲ್ನಡಿಗೆಯಲ್ಲ ನಡೆದು ಸಾಧಿಸಿದ್ದಾರೆ. ಚಿಪ್ಕೋ ತಂಡ ಹಳ್ಳಿಯ ಜನರಿಗೆ ಮೂಲಭೂತವಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದೆ. ಮೊದಲನೆಯದು ; ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು. ಎರಡನೆಯದು : ಆಹಾರ, ಮೇವು, ಸೌದೆ, ಗೊಬ್ಬರ ಮತ್ತು ನಾರು ಈ ಐದು ಆವಶ್ಯಕತೆಗಳನ್ನು ಪೂರೈಸುವಂತಹ ಮರಗಳನ್ನು ನೆಡುವುದು. ಈ ಎರಡೂ ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ? ಚಿಪ್ಕೋ ಚಳವಳಿಯ ಅಸಾಧಾರಣ ಯಶಸ್ಸಿನ ಗುಟ್ಟೆಂದರೆ ಅದು ಜನರಿಂದ, ಜನರ ಒಳತಿಗಾಗಿ ಹುಟ್ಟಿ ಬೆಳೆದ ಆಂದೋಲನ. ವೈಯಕ್ತಿಕ ಮಟ್ಟದಲ್ಲಿ ಪರಿಸರ ಪ್ರಜ್ಞೆ ಬೆಳೆದಾಗ ಮಾತ್ರ ನಮ್ಮನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳಿಂದ ನಮಗೆ ಮುಕ್ತಿ ಸಾಧ್ಯ.

ಪ್ರಶ್ನೆಗಳು

1. ಯಾವ ಎರಡು ದೃಷ್ಟಿಕೋನಗಳ ಸಮ್ಮೇಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ?
2. ಹಿಮಾಲಯ ಪರ್ವತ ಪ್ರದೇಶದ ಹಳ್ಳಿಗಳಲ್ಲಿ ಚಿಪ್ಕೋ ಚಳವಳಿ ಜನಪ್ರಿಯಗೊಳಿಸಿದ ಎರಡು ಕಾರ್ಯಕ್ರಮಗಳು ಯಾವುವು?

**XII. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ 15 ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.** **1 x 4 = 4**

37. ಸಮೂಹ ಮಾಧ್ಯಮಗಳು

**ಅಥವಾ**

ಗ್ರಂಥಾಲಯಗಳ ಮಹತ್ವ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1 x 5 = 5**

38. ನಿಮ್ಮನ್ನು ದಾಸರಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರಘು ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ ಕನ್ನಡಪ್ರಭ ದಿನಪತ್ರಿಕೆಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಕೋಲಾರದ ಕವನ ಎಂದು ಭಾವಿಸಿಕೊಂಡು ನಿಮ್ಮ ಊರಿನ ಜಾತ್ರೆಗೆ ಬರುವಂತೆ ಆಹ್ವಾನಿಸಿ ಶಿರಸಿಯಲ್ಲಿರುವ ನಿಮ್ಮ ಗೆಳತಿ ಭಾವನ ಅವರಿಗೆ ಪತ್ರ ಬರೆಯಿರಿ.

* * * *



Use E-Papers, Save Tress
Above line hide when print out